***ಓ.ಎಸ್.ನಂ.310/2015***
***ಪಿ.ಡಬ್ಲ್ಯೂ-1***

***<u>ದಿಃ 12-06-2019 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.</u>***

***<u>ಮುಖ್ಯ ವಿಚಾರಣೆ ಃ ವಾದಿ ಪರ</u>*** <u>ಶ್ರೀ ಟಿ ಆರ್ ಎಸ್</u> ***<u>ವಕೀಲರಿಂದ.</u>***

ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿರುವ ಎಲ್ಲಾ ಸಂಗತಿಗಳು ನನ್ನ ಸ್ವಂತ ಮಾಹಿತಿ ಮೇರೆಗೆ ನನ್ನ ವಕೀಲರಿಗೆ ಹೇಳಿ ಬರೆಸಿದ್ದು ಅವು ಸತ್ಯವಾಗಿರುತ್ತವೆ. ಪ್ರಮಾಣಪತ್ರದಲ್ಲಿನ ಸಂತಿಗಳನ್ನು ತಿಳಿದುಕೊಂಡು ಸಹಿ ಮಾಡಿರುತ್ತೇನೆ.

***2. ನಾನು ನ್ಯಾಯಾಲಯಕ್ಕೆ*** ದಾವಾಸ್ವತ್ತಿಗೆ ಸಂಬಂದಿಸಿದ ರೆಕಾರ್ಡ್ ಆಫ್ ರೈಟ್ಸ್‌ನ ದೃಡೀಕೃತ ನಕಲನ್ನು ಹಾಜರುಪಡಿಸಿರುತ್ತೇನೆ. ಅದನ್ನು ನಿಪಿ-*1* ಎಂದು ಗುರುತಿಸಲಾಯ್ತು. ದಾವಾಸ್ವತ್ತಿಗೆ ಸಂಬಂದಿಸಿದ ಇಂಡೆಕ್ಸ್ ಆಫ್ ಲ್ಯಾಂಡ್ಸ್ ದೃಡೀಕೃತ ನಕಲನ್ನು ಹಾಜರುಪಡಿಸಿರುತ್ತೇನೆ. ಅದನ್ನು ನಿಪಿ-*2* ಎಂದು ಗುರುತಿಸಲಾಯ್ತು. ಸರ್ವೆ ನಂಃ *24/3* ರ ಒಂದು ಪಹಣಿ ಪತ್ರಿಕೆಯನ್ನು ಹಾಜರುಪಡಿಸಿರುತ್ತೇನೆ. ಅದನ್ನು ನಿಪಿ-*3* ಎಂದು ಗುರುತಿಸಲಾಯ್ತು. ಸರ್ವೆ ನಂಃ *24/3* ರ ಒಂದು ಪಹಣಿಪತ್ರಿಕೆಯನ್ನು ಹಾಜರುಪಡಿಸಿರುತ್ತೇನೆ. ಅದನ್ನು ನಿಪಿ-*4* ಎಂದು ಗುರುತಿಸಲಾಯ್ತು. ಎಂ ಆರ್ ನಂಃ *7/1991-92* ರ ದೃಡೀಕೃತ ನಕಲನ್ನು ಹಾಜರುಪಡಿಸಿರುತ್ತೇನೆ. ಅದನ್ನು ನಿಪಿ-*5* ಎಂದು ಗುರುತಿಸಲಾಯ್ತು. ಸರ್ವೆ ನಂಃ *24/6* ರ ಒಂದು ಪಹಣಿ ಪತ್ರಿಕೆಯನ್ನು ಹಾಜರುಪಡಿಸಿರುತ್ತೇನೆ. ಅದನ್ನು ನಿಪಿ-*6* ಎಂದು ಗುರುತಿಸಲಾಯ್ತು. ದಿಃ *03-09-2015* ರಂದು ಮಾಡಿದ ದಾನಪತ್ರದ ದೃಡೀಕೃತ ನಕಲನ್ನು ಹಾಜರುಪಡಿಸಿರುತ್ತೇನೆ. ಅದನ್ನು ನಿಪಿ-*7* ಎಂದು ಗುರುತಿಸಲಾಯ್ತು. ಸರ್ವೆ ನಂಃ *24/3* ರ *2014-15* ನೇ ಸಾಲಿನ ಪಹಣಿಪತ್ರಿಕೆ ಹಾಜರುಪಡಿಸಿರುತ್ತೇನೆ. ಅದನ್ನು ನಿಪಿ-*8* ಎಂದು ಗುರುತಿಸಲಾಯ್ತು. ನನ್ನ ಕುಟುಂಬದ ವಂಶವೃಕ್ಷದ ಪ್ರತಿಯನ್ನು ಹಾಜರುಪಡಿಸಿರುತ್ತೇನೆ. ಅದನ್ನು ನಿಪಿ-*9* ಎಂದು ಗುರುತಿಸಲಾಯ್ತು. ***ಆದ್ದರಿಂದ ದಾವೆಯಲ್ಲಿ ಕೇಳಿದಂತೆ ಡಿಕ್ರಿ ಮಾಡಬೇಕೆಂದು ನ್ಯಾಯೂಲಯಕ್ಕೆ ಪ್ರಾರ್ಥಿಸುತ್ತೇನೆ.***

***ಈ ಹಂತದಲ್ಲಿ ಪಾಟೀ ಸವಾಲಿಗೆ ಪ್ರತಿವಾದಿ ಪರ ವಕೀಲರು ಕಾಲಾವಕಾಶ ಕೋರಿದ್ದರಿಂದ ಕಾಲಾವಕಾಶ ನೀಡಿ ಮುಂದೂಡಲಾಯಿತು.***

***(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)***

***ಓ. ಕೇ. ಸ. ಇ. ಎ. ಒ.***

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ. ರವರು, ತರೀಕೆರೆ.